ತಮಿಳುನಾಡಿನ ನಾಯನಾರ್ ಸಂತರು - ೬

ಕೋಚೆಂಗಾಟ್ ಚೋಳ ನಾಯನಾರ್

ಕಥೆ : ಡಾ. ವಿ. ಹೇಮಾ

ಚಿತ್ರ : ಶಂಕರ್

1 ಚೋಳ ಸಾಮ್ರಾಜ್ಯದಲ್ಲಿ ಒಂದು ಬಿಳಿ ಜಂಬೂನೇರಳೆ ಹಣ್ಣಿನ ಮರದಡಿಯಲ್ಲಿ ಒಂದು ಶಿವಲಿಂಗವಿತ್ತು. ಅದರ ಸಮೀಪದಲ್ಲೇ ಇದ್ದ ಚಂದ್ರತೀರ್ಥವೆಂಬ ಕೆರೆಯಿಂದ ಆನೆಯೊಂದು ಪ್ರತಿದಿನವೂ ನೀರನ್ನು ತಂದು ಆ ಶಿವಲಿಂಗಕ್ಕೆ ಅಭಿಷೇಕ ಮಾಡುತ್ತಿತ್ತು.



2 ಆ ಮರದಲ್ಲಿ ಒಂದು ಜೇಡ ವಾಸವಾಗಿತ್ತು. ಅದೂ ಕೂಡ ಆ ಶಿವಲಿಂಗವನ್ನು ಪೂಜಿಸುತ್ತಿತ್ತು. ತರಗೆಲೆ ಅಥವಾ ಧೂಳು ಶಿವಲಿಂಗದ ಮೇಲೆ ಬೀಳದಂತೆ ಅದರ ಸುತ್ತ ಜೇಡ ಬಲೆ ಹೆಣೆದಿತ್ತು.

3 ಒಂದು ದಿನ ಜೇಡ ಆ ಶಿವಲಿಂಗದ ಮೇಲೆ ಅಪಾರ ಭಕ್ತಿಯಿಂದ ಚಾವಣಿಯಂತೆ ಒಂದು ಬಲೆಯನ್ನು ಹೆಣೆದಿತ್ತು.



4 ಓ ! ಇದೇನು ತಂಟೆ! ಶಿವನ ತಲೆಯ ಮೇಲೆ ಜೇಡನ ಎಂಜಲು ಇರಬಹುದೆ? ಅದನ್ನು ನಾನು ಒಂದೇಟಿಗೆ ತೆಗೆದು ಹಾಕುತ್ತೇನೆ.



5 ಆನೆ ತನ್ನ ಸೊಂಡಿಲಿನಿಂದ ಬಲೆಯನ್ನೆಲ್ಲ ತೆಗೆದು ಹಾಕಿತು. ಅದನ್ನು ನೋಡಿದ ಜೇಡನಿಗೆ ತುಂಬಾ ಕೋಪ ಬಂತು.



6 ಆನೆಯ ಸೊಂಡಿಲಿನ ಒಳಗೆ ಹೊಕ್ಕ ಜೇಡ ಅದರ ಮರ್ಮಸ್ಥಾನಗಳನ್ನೆಲ್ಲ ಕಡಿಯಿತು.

ನೋವು ಸಹಿಸಲಾಗದೆ ಆನೆ ತನ್ನ ಸೊಂಡಿಲನ್ನು ನೆಲಕ್ಕೆ ಅನೇಕ ಸಲ ಜೋರಾಗಿ ಬಡಿದು ಸತ್ತುಹೋಯಿತು.

7 ಕೈಲಾಸದಲ್ಲಿದ್ದ ಶಿವಪಾರ್ವತಿಯರು ಇದನ್ನು ನೋಡಿದರು.

ದೇವಿ, ಚಿಂತಿಸಬೇಡ. ಆನೆಗೆ ಮುಕ್ತಿ ದೊರಕಿದೆ. ಇಂದಿನಿಂದ ಆನೆ ರಕ್ಷಿಸುತ್ತಿದ್ದ ಆ ಪ್ರದೇಶವನ್ನು ತಿರುವನೈ ಕಾವಲ್ ಎಂದು ಕರೆಯುತ್ತಾರೆ.

8 ಜೇಡನ ಬಗ್ಗೆ ನಿನ್ನ ತೀರ್ಮಾನವೇನು?

ದೇವಿ, ಕಾದು ನೋಡು...

9 ಚೋಳರಾಜ ಶುಭದೇವನು ನಟರಾಜನ ಪರಮಭಕ್ತನಾಗಿದ್ದ. ತನ್ನ ಬಳಿಕ ರಾಜ್ಯದ ಉತ್ತರಾಧಿಕಾರಿಯಾಗಲು ಒಂದು ಗಂಡುಮಗುವಿಗಾಗಿ ಅವನು ದೇವರನ್ನು ಪ್ರಾರ್ಥಿಸುತ್ತಿದ್ದ. ಅವನ ಭಕ್ತಿಗೆ ಮೆಚ್ಚಿದ ಶಿವನು ಒಂದು ದಿನ ಅವನ ಮುಂದೆ ಪ್ರತ್ಯಕ್ಷನಾದ.



ಶುಭದೇವ, ನಿನಗೊಂದು ಗಂಡುಮಗುವಾಗುವುದು.

10 ಶಿವನ ಅನುಗ್ರಹದಿಂದ ಶುಭದೇವನ ಪತ್ನಿ ಗರ್ಭಿಣಿಯಾದಳು. ಅವಳು ಮಗುವಿಗೆ ಜನ್ಮ ನೀಡುವ ಸಮಯ ಸಮೀಪಿಸಿತು..

ಮಹಾರಾಜ! ಕೆಲವೇ ಗಂಟೆಗಳ ನಂತರ ಜನನವಾದರೆ ಮಗುವನ್ನು ಇಡೀ ಲೋಕವೇ ಪೂಜಿಸುವುದು.



ರಾಜ, ಜ್ಯೋತಿಷ್ಯರು ಹೇಳಿದ ವಿಚಾರವನ್ನು ರಾಣಿಗೆ ತಿಳಿಸಿದ.

11 ಹೌದೆ? ಹಾಗಿದ್ದರೆ ನನ್ನನ್ನು ತಲೆಕೆಳಗಾಗಿ ತೂಗುಹಾಕಿ. ಜ್ಯೋತಿಷ್ಯರು ಹೇಳಿದ ಶುಭಗಳಿಗೆಯಲ್ಲೇ ನನ್ನ ಮಗನ ಜನನವಾಗಬೇಕು.

ಸೇವಕಿಯರು ರಾಣಿ ಆಜ್ಞೆ ಮಾಡಿದಂತೆಯೇ ಮಾಡಿದರು. ಶುಭಗಳಿಗೆಯಲ್ಲಿ ರಾಣಿ ಗಂಡುಮಗುವನ್ನು ಹೆತ್ತಳು. ಆದರೆ ಹೆರಿಗೆ ತಡವಾದದ್ದರಿಂದ ಅವಳ ಜೀವಕ್ಕೆ ಅಪಾಯವುಂಟಾಗಿತ್ತು.

12 ರಾಜ, ಚಿಂತಿಸಬೇಡ. ನನ್ನ ಸಾವು ಹೆಚ್ಚು ತಡವಿಲ್ಲ. ನಟರಾಜನ ಅನುಗ್ರಹದಿಂದ ನಮಗೆ ಗಂಡುಮಗು ಹುಟ್ಟಿದೆ. ಈ ಮಗುವನ್ನು ನೀವು ರಾಜವೈಭವದಿಂದ ಬೆಳೆಸಬೇಕು.

ಆಗಲಿ, ದೇವಿ. ಈ ಮಗುವಿನ ಕಣ್ಣು ಕೆಂಪಗಿದೆ. ಆದ್ದರಿಂದ ಇದಕ್ಕೆ ಸೇಂಕಣ್ಣನ್ ಎಂದೇ ಹೆಸರಿಡುತ್ತೇನೆ.

13 ಕಾಲ ಕಳೆಯಿತು. ಸೇಂಕಣ್ಣನ್ ಬೆಳೆದು ಯುವಕನಾದ.



14 ಹಿಂದಿನ ಜನ್ಮದಲ್ಲಿ ಶಿವನನ್ನು ಆರಾಧಿಸಿದ್ದ ಜೇಡನೇ ಈಗ ಸೇಂಕಣ್ಣನ್ ಆಗಿ ಜನ್ಮ ತಳೆದಿತ್ತು. ಆದ್ದರಿಂದ ಸೇಂಕಣ್ಣನ್ ಬಾಲ್ಯದಿಂದಲೇ ತಿರುವಣ್ಣೈಕಾವಲ್ ಶಿವನ ಮೇಲೆ ಅಪಾರ ಭಕ್ತಿಯನ್ನು ಹೊಂದಿದ್ದ.



15 ದೇವರ ಸೇವೆ ಮಾಡಿದವರಿಗೆ ಅವನು ಮುಕ್ತಿ ನೀಡುತ್ತಾನೆ. ಅವನು ಭಕ್ತಿಯನ್ನೂ ಕರುಣಿಸುತ್ತಾನೆ; ಈ ಮೂಲಕ ಅವನ ಭಕ್ತರು ಈ ಜನ್ಮದಲ್ಲೇ ಪರಮಾನಂದವನ್ನು ಹೊಂದುತ್ತಾರೆ.